ಓ ಎಸ್ ನಂಃ 754-14
ಡಿ ಡಬ್ಲ್ಯೂ ಃ 1

ದಿಃ 26-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎನ್ ಡಿ ವಕೀಲರಿಂದ

21. ವಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ವಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ಪ್ರಶ್ನೆ ಮಾಡಿಲ್ಲ. ಪೂರ್ವಕ್ಕೆ ರಂಗಣ್ಣರವರ ಆಸ್ತಿ, ಪಶ್ಚಿಮಕ್ಕೆ ಮಾಗಡಿ ಕುಣಿಗಲ್ ರಸ್ತೆ, ಉತ್ತರಕ್ಕೆ ರಂಗಯ್ಯ ಮತ್ತು ಆಂಜಿನಪ್ಪರವರ ಆಸ್ತಿ, ದಕ್ಷಿಣಕ್ಕೆ ಮಾಗಡಿ ಹುಲಿಯೂರು ದುರ್ಗ ರಸ್ತೆ ಆಸ್ತಿಯ ಮೇಲೆ ನಮಗೆ ಹಕ್ಕು ಇದೆಯಾ ಎಂದರೆ ಇದೆ ಎಂದು ಹೇಳುತ್ತಾರೆ. ಈ ಆಸ್ತಿಯಲ್ಲಿ 1 ಎಕರೆ 27 ಗುಂಟೆ ಜಮೀನು ಇರುತ್ತದೆ. ಮೇಲೆ ಹೇಳಿದ ಚಕ್ಕುಬಂದಿ ಸರ್ವೆ ನಂ 69/3 ರಲ್ಲಿ ಬರುತ್ತದೆ. ನನ್ನ ಆಸ್ತಿಯ ಸರ್ವೆ ನಂ 69/2 ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಸರ್ವೆ ನಂ 69/3 ಮತ್ತು ಸರ್ವೆ ನಂ 69/2 ಕ್ಕೆ ನಾನೇ ಮಾಲೀಕನಾಗಿರುತ್ತೇನೆ. ಸಾಕ್ಷಿ ಮುಂದುವರೆದು ಈ ಎರಡು ಆಸ್ತಿಗಳು ಒಂದೇ ಚಕ್ಕುಬಂದಿಯಲ್ಲಿ ಬರುತ್ತದೆ. ಸರ್ವೆ ನಂ 69/2 ಮತ್ತು ಸರ್ವೆ ನಂ 69/3 ರ ಮೂಲ ಸರ್ವೆ ನಂ 69 ಇರುತ್ತದೆ. ಸರ್ವೆ ನಂ 69 ರಲ್ಲಿ ಒಟ್ಟು 8 ಎಕರೆ 01 ಗುಂಟೆ ಇರುತ್ತದೆ. ಆ ಆಸ್ತಿಯಲ್ಲಿ 1 ಎಕರೆ 15 ಗುಂಟೆ ಜಮೀನು ಖರಾಬು ಇರುತ್ತದೆ. ಸರ್ವೆ ನಂ 69/1, 69/2 ಮತ್ತು 69/3 ಸರ್ವೆ ನಂ 69 ರಿಂದ ಪೋಡಿಯಾದ ನಂತರ ಬಂದಿರುತ್ತವೆ. ಸರ್ವೆ ನಂ 69/3 ನನ್ನ ಮಾಲೀಕತ್ವದಲ್ಲಿ ಬರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಾನು ಸರ್ವೆ ನಂ 69/3 ರ ಮಾಲೀಕ ಎಂದು ತೋರಿಸಲು ದಾಖಲೆಗಳು ಇಲ್ಲ ಆದರೆ ಸರ್ವೆ ನಂ 69/2 ಕ್ಕೆ ನಾನು ಮಾಲೀಕ ಎಂದು ತೋರಿಸಲು ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ದಾಖಲೆ ಇದೆ ಎಂದು ಹೇಳುತ್ತಾರೆ. ನನಗೂ ಸರ್ವೆ ನಂ 69/3 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂ 69/3 ರ ಮಾಲೀಕ ಅಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 69 ರಲ್ಲಿ ಒಟ್ಟು 8 ಎಕರೆ 01 ಗುಂಟೆ ಜಮೀನಿನ ಮೂಲ ಮಾಲೀಕರು ಭದ್ರಯ್ಯ ಶೆಟ್ಟಿಯಾಗಿರುತ್ತಾರೆ. ಭದ್ರಯ್ಯಶೆಟ್ಟಿಯವರಿಂದ ಯಲ್ಲಮ್ಮ ಎಂದರೆ ವಾದಿಯ ಅಜ್ಜಿಯವರಿಂದ ಅಂದರೆ ವಾದಿಯ ತಂದೆಯ ತಾಯಿಯವರ ಕಡೆಯಿಂದ 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನಾನು ಪಾಪಣ್ಣರವರ ಕಡೆಯಿಂದ 1 ಎಕರೆ 27 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ. ಪಾಪಣ್ಣರವರು ಸೀಗೆಕುಪ್ಪೆ ನರಸಿಂಹಯ್ಯರವರ ಕಡೆಯಿಂದ ಆ ಆಸ್ತಿಯನ್ನು ಖರೀದಿ ಮಾಡಿದ್ದರು. ನರಸಿಂಹಯ್ಯರವರು ಆ ಆಸ್ತಿಯನ್ನು ವಾದಿಯ ತಂದೆಯಾದ

ರಾಮಾಂಜಿನಯ್ಯರವರ ಕಡೆಯಿಂದ ಖರೀದಿ ಮಾಡಿದ್ದರು.

22. ಸರ್ವೆ ನಂ 69/1 ಎಷ್ಟು ಎಕರೆ ಇರುತ್ತದೆ ಮತ್ತು ಅದು ಯಾರ ಸ್ವಾಧೀನತೆಯಲ್ಲಿರುತ್ತದೆ ಗೊತ್ತಿಲ್ಲ. ಯಲ್ಲಮ್ಮರವರು 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿದ್ದು ನಾನು 1 ಎಕರೆ 27 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾಗಿ ಹೇಳಿದ್ದು 1 ಎಕರೆ 20 ಗುಂಟೆ ಜಮೀನು 1 ಎಕರೆ 27 ಗುಂಟೆ ಹೇಗೆ ಆಗಿರುತ್ತದೆ ನನಗೆ ಗೊತ್ತಿಲ್ಲ. 1 ಎಕರೆ 27 ಗುಂಟೆ ಜಮೀನಿನಲ್ಲಿ 7 ಗುಂಟೆ ಜಮೀನು ಖರಾಬು ಇದ್ದು ನಾನು 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಮಾಂಜಯ್ಯರವರಿಂದ ನರಸಿಂಹಯ್ಯ, ನರಸಿಂಹಯ್ಯರವರಿಂದ ಪಾಪಣ್ಣರವರಿಗೆ ಆದ ಕ್ರಯಪತ್ರಗಳಲ್ಲಿ 1 ಎಕರೆ 27 ಗುಂಟೆ ಜಮೀನು ಎಂದು ಬಂದಿರುತ್ತದೆ. ನಾನು ಸರ್ವೆ ನಂ 69/2 ರಲ್ಲಿ 1 ಎಕರೆ 27 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿದ್ದು ಆಗ ಆ ಆಸ್ತಿಯ ಸರ್ವೆ ಮಾಡಿಸಿಲ್ಲ. ಸರ್ವೆ ನಂ 69 ಪೋಡಿಯಾಗುವಾಗ ಅದನ್ನು ಸರ್ವೆ ಮಾಡಿ ಪೋಡಿ ಮಾಡಿರುತ್ತಾರೆ. ಸರ್ವೆ ನಂ 69/2 ರಲ್ಲಿ ನಾನು ಖರೀದಿ ಮಾಡಿದ 1 ಎಕರೆ 27 ಗುಂಟೆ ಜಮೀನಿನಲ್ಲಿ ಯಾವುದೇ ಖರಾಬು ಇರುವುದಿಲ್ಲ.

23. ನಾನು 1 ಎಕರೆ 27 ಗುಂಟೆ ಜಮೀನಿಗೆ ಮಾತ್ರ ಮಾಲೀಕನಾಗಿರುತ್ತೇನೆ. ನಾನು ಸರ್ವೆ ನಂ 69/2 ರಲ್ಲಿ 1 ಎಕರೆ 27 ಗುಂಟೆ ಜಮೀನಿಗೆ ಮಾತ್ರ ನಾನು ಕ್ಲೈಮು ಮಾಡಿದ್ದು ಹೆಚ್ಚಿನ ಆಸ್ತಿಗೆ ಕ್ಲೈಮು ಮಾಡಿಲ್ಲ. ಸರ್ವೆ ನಂ 69/3 ರಲ್ಲಿ ಪೂರ್ವಕ್ಕೆ ರಂಗಣ್ಣರವರ ಆಸ್ತಿ, ಪಶ್ಚಿಮಕ್ಕೆ ಪಾಪಣ್ಣರವರ ಆಸ್ತಿ, ಉತ್ತರಕ್ಕೆ ಆಂಜನಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ರಸ್ತೆ ಇರುವ ಆಸ್ತಿಯಲ್ಲಿ ನನಗೇನಾದರೂ ಹಕ್ಕು ಇದೆಯಾ ಎಂದರೆ ಇದೆ ಎಂದು ಹೇಳುತ್ತಾರೆ. ಈ ಚಕ್ಕುಬಂದಿಯಲ್ಲಿ ಬರುವ ಆಸ್ತಿಯ ವಿಸ್ತೀರ್ಣ 20 ಗುಂಟೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನನಗೂ ಕೂಡ ಹಕ್ಕು ಇದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಪಕ್ಕದಲ್ಲಿ 5 ಗುಂಟೆ ಜಮೀನು ಇದೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**